
ಎನ್ನುವ ಅರಿವನ್ನು ಖಾನ್ ಸಾಹೇಬರು ಅವರಲ್ಲಿ ಮೂಡಿಸಿ, ಅವರ ಮೂರನೆಯ ಕಣ್ಣನ್ನು ತೆರೆಸಿದ್ದರು. ಇಡೀ ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯಲೋಕ ಭಯ, ಗೌರವಗಳಿಂದ, ಬೆರಗುಗಣ್ಣುಗಳಿಂದ ನೋಡುತ್ತಿದ್ದ ಅತ್ಯಂತ ಮೇಧಾವಿ ಸಾಹಿತ್ಯ ವಿಮರ್ಶಕ, ಪ್ರಖರ ನಿಶಿತಮತಿ, ಎದುರಾಳಿಯ ಮೇಲೆ ಸಿಂಹದಂತೆ ಎರಗುತ್ತಿದ್ದವರು ರಾಜೀವ್ ತಾರಾನಾಥ್. ಅವರು ಕುಳಿತು ಬರೆಯುವುದಿಲ್ಲ ಎನ್ನುವ ಕಾರಣಕ್ಕೆ ಮೈಸೂರು



ರೀಜನಲ್ ಕಾಲೇಜಿಗೆ ಬಂದು ಅವರು ಹೇಳಿದ್ದನ್ನು ಬರೆದುಕೊಂಡು ಹೋಗುತ್ತಿದ್ದರಂತೆ ಕೀರ್ತಿನಾಥ ಕುರ್ತಕೋಟಿಯವರು. ಅಂಥಾ ರಾಜೀವರಿಗೆ ಸಂಗೀತದಲ್ಲಿ ಗುರು-ಶಿಷ್ಯರಿಗೆ ಇದ್ದ ಅನನ್ಯವಾದ ಸಂಬಂಧದ ಅರಿವನ್ನು ಖಾನ್ ಸಾಹೇಬರು ಮೂಡಿಸಿದ್ದರು. “ನನಗೆ ಭಕ್ತಿ ಎಂದರೆ ಏನು ಅಂತ ಗೊತ್ತು. ಅದು ನಮ್ಮ ಉಳಿದ ನವ್ಯರಿಗೆ ಗೊತ್ತಿಲ್ಲ. ಭಕ್ತಿ ಇದ್ದರೆ ನೀನು ದೊಡ್ಡವನಾಗುತ್ತೀಯ, ಇಲ್ಲದಿದ್ದರೆ ಇಲ್ಲ. ನಿಮ್ಮನ್ನ ಗುರುವಿಗೆ ಒಪ್ಪಿಸಿಕೊಂಡುಬಿಟ್ಟರೆ, ಗುರು ಏನು ಹೇಳ್ಕೊಡ್ತಾರೋ ಅದು ಸಿಗುತ್ತೆ, ನಿಮ್ಮೊಳಕ್ಕೆ ಬರ್‍ತಾ ಹೋಗುತ್ತೆ, ಬೆಳೆದು ಗಿಡ ಆಗುತ್ತೆ, ಮರ ಆಗುತ್ತೆ, ಕೊನೆಗೆ ಹಣ್ಣು ಬಿಡುತ್ತೆ. ಆದರೆ ಆ ಭಕ್ತಿ ಇರಬೇಕು. ಸಂಗೀತ ಹೇಳಿಕೊಡೋದಕ್ಕೂ ಹಾಗೂ ಕಲಿಯೋದಕ್ಕೂ, ಇಂಗ್ಲಿಷ್ ಹೇಳಿಕೊಡೋದಕ್ಕೂ ಮತ್ತು ಕಲಿಯೋದಕ್ಕೂ ಇದೇ ಮುಖ್ಯ ವ್ಯತ್ಯಾಸ.’’ ಈ ಅರಿವು ರಾಜೀವ್ ಅವರ ಇಡೀ ವ್ಯಕ್ತಿತ್ವವನ್ನು ಅನನ್ಯವಾಗಿಸಿತ್ತು.

ಆದರೆ ಬದುಕಿನ ಅನಿರೀಕ್ಷಿತ ಏರಿಳಿತಗಳು ಈ ಗುರುಶಿಷ್ಯರನ್ನು 22 ವರ್ಷಗಳ ಕಾಲ ಅಗಲಿಸಿತ್ತು. ದೇಶದ ಪ್ರಖ್ಯಾತ ಸಂಸ್ಥೆಗಳಲ್ಲಿ ಇಂಗ್ಲಿಷ್ ಮಾಸ್ತರಿಕೆ ಮಾಡಿ ತಮ್ಮದಲ್ಲದ ತಾಣಗಳಲ್ಲಿ ಇದ್ದ ತಾರಾನಾಥರನ್ನು ಅವರು ಸೇರಬೇಕಾದ ಗಮ್ಯಕ್ಕೆ ಸೇರಿಸಿದವರು ಪಂಡಿತ್ ರವಿಶಂಕರ್. “ನಮ್ಮ ಘರಾನೆಯಲ್ಲಿ ನೀನು ಕಲಿತೆಯಲ್ಲ, ಅದು ಏನೋ ಒಂದಿಷ್ಟು ಈಗ ನಿನ್ನ ಕೈಯಲ್ಲಿ ಕೂತಿದೆಯಲ್ಲ ಆ ಸ್ವರ, ಆ ಧಾಟಿ ಆ ಕಡೇನೂ ನಿನ್ನ ಕರ್ತವ್ಯ ಒಂದಿಷ್ಟು ಇದೆ ಎನ್ನುವ ಯೋಚನೆ ನಿನಗೆಂದಾದರೂ ಬಂದಿದೆಯಾ? ಬಹಳ ಅಮೂಲ್ಯವಾದದ್ದು ನಮ್ಮಿಂದ ಪಡೆದುಕೊಂಡೆಯಲ್ಲ, ಅದಕ್ಕೆ ನೀನೊಂದಿಷ್ಟು ಕೊಡಬೇಕಲ್ಲವೇ?’’ ಎಂದು ಪಂಡಿತ್ ರವಿಶಂಕರ್ ಅವರಿಗೆ ನೆನಪಿಸಿದ ಕೂಡಲೆ, ತಮ್ಮ 50ರ ಹರೆಯದಲ್ಲಿ ಎಲ್ಲವನ್ನೂ ಬಿಟ್ಟು ತಾರಾನಾಥರು ಸರೋದನ್ನು ತಬ್ಬಲು, ಸಂಗೀತ ಸಾಗರದಲ್ಲಿ ಮುಳುಗಿಹೋಗಲು ‘ದೀನ ನಾ ಬಂದಿರುವೆ’ ಎಂದು ಗುರುಗಳ ಮನೆ ಬಾಗಿಲನ್ನು ತಟ್ಟಿದ್ದರು. ಈ ಗುರುಋಣದ ಭಾವ ಜೀವನದುದ್ದಕ್ಕೂ ಅವರಲ್ಲಿತ್ತು. ಅಂದಿನಿಂದ ‘ನಾನೇರಿದೆತ್ತರಕೆ ನೀನೇರಬಲ್ಲೆಯಾ?’ ಎಂದು ಯಾರೋ ಸವಾಲು ಹಾಕುತ್ತಿದ್ದಾರೆಯೋ ಎನ್ನುವಂತೆ ಸಂಗೀತವೆಂಬ ಶಿಖರವನ್ನು ಏರಲಾರಂಭಿಸಿದರು. ನಂತರದ ಅವರ ಇಡೀ ಬದುಕನ್ನು ನಿರಂತರ ಹುಡುಕಾಟ, ರಿಯಾಜ್ ಮತ್ತು ಅಧ್ಯಾಪನ ಹತ್ತು ಹಲವು ಬಗೆಗಳಲ್ಲಿ ಆವರಿಸಿಕೊಂಡವು.

ಅವರ ಈ ಹುಡುಕಾಟ, ಸುಮ್ಮನೆ ಹೊಸತನದ ರುಚಿಯ ಬೆನ್ನತ್ತಿ ಹೊರಟ ಅಪ್ರಯೋಜಕ, ಕ್ಷುಲ್ಲಕ, ವ್ಯಾವಹಾರಿಕ ಹುಡುಕಾಟವಾಗಿರಲಿಲ್ಲ. ಇವರಿಗೆ ಹುಡುಕಾಟ ಎನ್ನುವುದು ನಿಜವಾಗಿಯೂ ಒಂದು ನಿರಂತರ ಶಿಸ್ತಾಗಿತ್ತು. ಹದ ಕಂಡುಕೊಳ್ಳುವ